# ಹೇ ಕನ್ನಡತಿ, ಯಾಕೆ ಹಿಂಗಾಡ್ತಿ?

ಕನ್ನಡ ಟಿವಿ ವಾಹಿನಿಯೊಂದು ಸಮೂಹ ಸಂವಾದ ಏರ್ಪಡಿಸಿತ್ತು. ಚರ್ಚೆಯ ವಿಷಯ: ಯುವ ಜನಾಂಗದ ಉಡುಪಿನ ಅಭಿರುಚಿಯನ್ನು ಕುರಿತಾದದ್ದು. ಬಹುಪಾಲು ಯುವಕರು ಹೆಣ್ಣುಮಕ್ಕಳ ಆಧುನಿಕ ಉಡುಪನ್ನು ತೀಕ್ಷ್ಣವಾಗಿ ವಿಮರ್ಶಿಸುತ್ತಿದ್ದರು. ಅವರು ಪ್ಯಾಂಟು ಷರ್ಟು ಸ್ಕರ್ಟುಗಳನ್ನು ಹಾಕುವುದರ ಬಗ್ಗೆ ಅಸಮ್ಮತಿ ಸೂಚಿಸುತ್ತಿದ್ದರು. ಮೈಮುಚ್ಚುವ ಸಲ್ವಾರ್‌ಗಳನ್ನು ಮತ್ತು ಸೀರೆಗಳನ್ನು ಉಡಬೇಕೆಂದು ವಾದಿಸುತ್ತಿದ್ದರು.

ಮತ್ತೊಂದು ವಾಹಿನಿಯಲ್ಲಿ ಚಿತ್ರಗೀತೆ ಬರುತ್ತಿತ್ತು. ಅದೊಂದು ಛೇಡಿಸುವ ಗೀತೆ. ನಾಯಕ ನಾಯಕಿ ಉಡುಗೆ ತೊಡುಗೆಗಳನ್ನು ಟೀಕಿಸಿ 'ಏನೇ ಕನ್ನಡತಿ, ಯಾಕೆ ಹಿಂಗಾಡ್ತಿ?' ಎಂದು ಛೇಡಿಸುತ್ತಿದ್ದ. ಅವಳು ಪ್ಯಾಂಟು ಸ್ಕರ್ಟು ತೊಟ್ಟಿದ್ದಳು.

ಈ ಎರಡೂ ಪ್ರಸಂಗಗಳಲ್ಲಿ ಹೆಣ್ಣುಮಕ್ಕಳು ಭಾರತೀಯ ಸಂಸ್ಕೃತಿಯನ್ನು ಮೀರುತ್ತಿದ್ದಾರೆಂಬುದೇ ಮುಖ್ಯ ಅಪಾದನೆಯಾಗಿದೆ. ಅವಳು ಸದಾ ಸಂಸ್ಕೃತಿ ರಕ್ಷಕಳಾಗಿರಬೇಕು. ಆಚಾರ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬರಬೇಕೆಂಬುದೇ ಪುರುಷರ ಧೋರಣೆಯಾಗಿತ್ತು. ಆದರೆ ಈ ಎರಡೂ ಪ್ರಸಂಗದಲ್ಲೂ ಗಂಡಸು ಭಾರತೀಯತೆಯನ್ನು ಪ್ರತಿನಿಧಿಸುವಂಥ ಉಡುಪನನ್ನೇನು ಧರಿಸಿರಲಿಲ್ಲ. ಯುವಕರು ಪ್ಯಾಂಟು ಷರ್ಟು ಜರ್ಕಿನ್‌ಗಳನ್ನು ಧರಿಸಿದ್ದರೆ, ನಾಯಕ ಅತ್ಯಾಧುನಿಕ ವಿದೇಶಿ ಶೈಲಿಯ ಧಿರಸನ್ನೇ ಧರಿಸಿ ಬೂಟು ಹಾಕಿದ್ದ. ಅಂದರೆ ಅದರರ್ಥ– ಭಾರತೀಯತೆಯೆಂಬುದು ಹೆಂಗಸರಲ್ಲಿರಬೇಕು. ಅದು ಗಂಡಸರಿಗೆ ಅನ್ವಯವಾಗುವುದಿಲ್ಲ, ಅವರು ಹೇಗಿದ್ದರೂ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಾರೆಂಬುದು. ಈ ಲಿಂಗ ತರತಮಭಾವ ಪುರುಷನೆಂಬ ಅಹಂಕಾರ ಮೂಲದಿಂದ ಜನಿಸಿರುವಂಥದ್ದು. ತಾನು ಹೇಗಿದ್ದರೂ ಆಯಿತು. ಹೆಣ್ಣು ಮನೆಯನ್ನು ಸರಿಯಾಗಿ ನಿರ್ವಹಿಸಬೇಕು; ಸಂಪ್ರದಾಯ ಆಚಾರಗಳನ್ನು ಚಾಚೂತಪ್ಪದೆ ಆಚರಿಸಿ ಮುಂದುವರಿಸಿಕೊಂಡು ಹೋಗಬೇಕು; ಅದು ಅವಳ ಕರ್ತವ್ಯ; ಅದನ್ನು ಮೀರುವುದು ತಪ್ಪು; ಅವಳು ಪುರುಷ ಹಾಕಿದ ಲಕ್ಷ್ಮಣ ರೇಖೆಯ ಒಳಗೇ ಬದುಕು ಸಾಗಿಸಬೇಕು ಮತ್ತು ಆಧುನಿಕ ಜೀವನ ಶೈಲಿ, ವಿಚಾರಧಾರೆಗಳಿಗೆ ಪಕ್ಕಾಗಬಾರದೆಂಬುದು ಇಂಥ ಮಾತುಗಳ ಹಿಂದೆ ಅಡಗಿರುವ ಸತ್ಯ.

ಉಡುಪಿನ ವಿಚಾರಕ್ಕೆ ಬಂದರೆ– ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ನಿಜವಾದ ವೇಷಭೂಷಣ ಯಾವುದು ಎಂಬ ಪ್ರಶ್ನೆಗೆ ಮೊದಲು ಉತ್ತರ ಕಂಡುಕೊಳ್ಳಬೇಕು. ಇಡೀ ಭಾರತಕ್ಕೆ ಏಕ ರೂಪವಾದ ಭಾಷೆ, ಆಹಾರ ಪದ್ಧತಿ ಹೇಗಿಲ್ಲವೋ ಹಾಗೆಯೇ ಏಕರೂಪ ಉಡುಪಿಲ್ಲ. ಪಂಜಾಬಿಯ ಹಾಗೆ ಕೇರಳದವನಿಲ್ಲ; ಬಿಹಾರಿ ಇದ್ದ ಹಾಗೆ ಕಾಶ್ಮೀರಿ ಇಲ್ಲ, ರಾಜಸ್ಥಾನಿ ಇದ್ದ ಹಾಗೆ ತಮಿಳಿಗ ಇಲ್ಲ. ಭಾರತದ ಆತ್ಮ ಅಡಗಿರುವುದೇ ಅದರ ವೈವಿಧ್ಯತೆಯಲ್ಲಿ! ಏಕರೂಪತೆಯ ಏಕತಾನತೆ ಭಾರತೀಯತ್ವ ಅಲ್ಲ. ಸ್ತ್ರೀಯರು ಉಡುವ ಸೀರೆಯೂ ಕೂಡ ಅಖಂಡ ಭಾರತದ ಲಕ್ಷಣವಲ್ಲ. ಸೀರೆಯುಟ್ಟರೂ ಒಂದೊಂದು ಕಡೆ ಒಂದೊಂದು ಬಗೆಯಲ್ಲಿ ಉಡುತ್ತಾರೆ. ಅದು ಕಣ್ಣಿಗೆ ಕಾಣುವ ಸತ್ಯ. ಗಂಡಸರ ಸೊಂಟದ ಕೆಳಗಿನ ಧಿರಿಸು ಕೂಡ ಪ್ರದೇಶದಿಂದ ಪ್ರದೇಶಕ್ಕೆ ಬೇರೆ ಬೇರೆ! ದಿರಿಸನ್ನು ಇಡೀ ದೇಶಕ್ಕೆ ಸಾಧಾರೀಕರಣಗೊಳಿಸಿ ಸಂಸ್ಕೃತಿಯೆಂಬ ಹೆಸರಿನಲ್ಲಿ ಮಾತನಾಡುವುದು ತಪ್ಪಾಗುತ್ತದೆ.

ಹಾಗೆ ನೋಡಿದರೆ ಭೂಮಿಯ ಮೇಲೆ ಮಾನವ ಉಡುಪನ್ನು ಅನುಕರಣೆಯಿಂದಲೇ ಧರಿಸುತ್ತಾಬಂದಿದ್ದಾನೆ. ಗ್ರಾಮ ಸಂಸ್ಕೃತಿ ನಗರ ಸಂಸ್ಕೃತಿಯನ್ನು ಅನುಕರಿಸಿದೆ. ಕೆಳಜಾತಿ/ವರ್ಗಗಳು ಮೇಲುಜಾತಿ/ವರ್ಗಗಳನ್ನು ಅನುಸರಿಸಿವೆ. ಇದನ್ನೇ ಸಮಾಜಶಾಸ್ತ್ರಜ್ಞರು 'ಸಂಸ್ಕೃತೀಕರಣ' ಎಂದು ಗುರುತಿಸುತ್ತಾರೆ. ಅನುಕರಣೆ ಸಹಜಕ್ರಿಯೆ ಹಾಗೂ ಅದು ಒಂದು ಪ್ರಾದೇಶಿಕ ಹವಾಮಾನಕ್ಕನುಗುಣವಾಗಿ, ಲಭ್ಯ ಸಂಪನ್ಮೂಲಗಳಿಗನುಗುಣವಾಗಿ ವರ್ತಿಸುತ್ತದೆ. ಅನುಕರಣೆ ಮಾಡುವವರು ಇದ್ದುದನ್ನು ಇದ್ದರೀತಿಯಲ್ಲಿಯೇ ಸ್ವೀಕರಿಸುವುದಿಲ್ಲ. ಅನ್ಯ ಸಾಂಸ್ಕೃತಿಕಾಂಶಗಳನ್ನು ತಮ್ಮ ಸಂದರ್ಭ ಮತ್ತು ಅಭಿರುಚಿಗಳಿಗನುಸಾರವಾಗಿ ಮಾರ್ಪಡಿಸುತ್ತಾರೆ. ಅದಕ್ಕೆ ದೇಸೀ ಸ್ಪರ್ಶ ನೀಡುತ್ತಾರೆ. ಅದನ್ನು ಹೊಸತಾಗಿ ಕಟ್ಟುವ ಪ್ರಯತ್ನದಲ್ಲಿ ತೊಡಗುತ್ತಾರೆ. ಇದೊಂದು ಅನನ್ಯತೆಯನ್ನು ತಮ್ಮದನ್ನಾಗಿಸಿಕೊಳ್ಳುವ ಕ್ರಿಯೆ. ನಿದರ್ಶನವೊಂದನ್ನು ನೋಡಬಹುದು: ಸೀರೆ ಮತ್ತು ಪಂಚೆ ಮೂಲತಃ ಭಾರತದೇಶದಲ್ಲಿ ಸಂಭವಿಸಿದ ವಿನ್ಯಾಸಗಳಲ್ಲವೆಂದೂ, ಅವು ರೋಮನ್ನರ ಸಂಸ್ಕೃತಿಯ ಕೊಡುಗೆಗಳೆಂದೂ ಕೆಲವರು ವಾದಿಸುತ್ತಾರೆ. ಈ ವಾದದಲ್ಲಿ ಸತ್ಯವಿರುವಂತೆ ತೋರುತ್ತದೆ. ಆದರೆ ರೋಮನ್ನರ ಈ ಉಡುಪನ್ನು ನಮ್ಮವರು 'ಭಾರತೀಕರಣ' ಮಾಡಿಕೊಂಡಿದ್ದಾರೆ.

ಉಡುಪು ಆಡಿಕೊಳ್ಳುವ ಸಂಗತಿಯಾಗಬಾರದು. ಅದು ನಮ್ಮ ದೇಹ ರಕ್ಷಣೆಯ ಸಾಧನ. ಈ ಸಾಧನವನ್ನು ತಂತಮ್ಮ ಅಭಿರುಚಿಗೆ ತಕ್ಕಂತೆ ಕಲಾತ್ಮಕಗೊಳಿಸಿಕೊಂಡು ಜನರು ಧರಿಸುತ್ತಾರೆ. ಅದು ಅಶ್ಲೀಲವೆನ್ನಿಸಿದರೆ ತಪ್ಪು. ಸಭ್ಯ ಗೆರೆಯನ್ನು ಅದು ಮೀರಬಾರದು. ಹಾಗೆ ನೋಡಿದರೆ ಪ್ಯಾಂಟು ಶರ್ಟುಗಳು, ಸಲ್ವಾರ್ ಕಮೀಜ್‌ಗಳು ಹೆಚ್ಚು ಅನುಕೂಲಕರವಾಗಿವೆ ಮತ್ತು ಸಭ್ಯತೆಯನ್ನು ಮೆರೆಯುತ್ತಿವೆ.

■ ಶಿಕಾಕು

# ಮಾತೇ ಮುತ್ತು

★ ಮನಶಾ ದುಖ ಬೇಕಾದಷ್ಟ ತಡಕೋಬಹುದು. ಆದರೆ ಸುಖಾ ತಡಕೊಳ್ಳೋದು ಬಹಳ ಕಷ್ಟ.

-ದ.ರಾ.ಬೇಂದ್ರೆ

★ ಮೊದಲು ನಿನ್ನಲ್ಲಿ ಶಾಂತಿ ಇದ್ದರೆ, ಇತರರಲ್ಲೂ ನೀನು ಶಾಂತಿ ಮೂಡಿಸಬಹುದು.

-ಥಾಮಸ್ ಕೆಂಪಿಸ್

★ ಬೃಹತ್ ಕಾದಂಬರಿ ರಚಿಸಿ ಮನುಷ್ಯನ ಆಯುಷ್ಯದ ಮೇಲೆ ಸವಾರಿ ಮಾಡಲು ಕಾದಂಬರಿಕಾರರಿಗೇನು ಹಕ್ಕಿದೆ?

-ವೈಕಂ ಮಹಮ್ಮದ್ ಬಷೀರ್

★ ಶ್ರೀಮಂತಿಕೆಯನ್ನು ಕಷ್ಟಪಟ್ಟು ಸಂಪಾದಿಸಬೇಕು, ಕಾಳಜಿಯಿಂದ ಕಾಯ್ದಿಡಬೇಕು. ಅದನ್ನು ಇನ್ನೊಬ್ಬರಿಗೆ ಕೊಡುವುದರಲ್ಲಿಯೇ ಅದರ ಶ್ರೇಷ್ಠತೆ ಇದೆ, ಬಡಜನರ ಕಣ್ಣೀರನ್ನು ಒರೆಸುವುದರಲ್ಲಿ ಇರುವ ಆನಂದವು ಬೇರೆ ಯಾವುದರಲ್ಲಿಯೂ ಇಲ್ಲ.

-ಪಾಟೀಲ ಪುಟ್ಟಪ್ಪ

★ ಸಾಯೋ ಮುಂದ ಸಂಸಾರ ಬಯಸಿದರ ಪ್ರಯೋಜನ ಏನು?

-ಎಚ್.ಎನ್.ಹೂಗಾರ

★ ಸತ್ಯವನ್ನು ಒಪ್ಪಿಕೊಳ್ಳುವಷ್ಟೇ ಅಸತ್ಯವನ್ನು ಒಪ್ಪಿಕೊಳ್ಳದಿರುವುದೂ ಅವಶ್ಯಕ.

-ಮಹಾತ್ಮ ಗಾಂಧೀಜಿ

★ ಸತ್ಯವನ್ನು ಯಾರೂ ನಂಬುವುದಿಲ್ಲ, ಮನ್ನಿಸುವುದಿಲ್ಲ. ಸುಳ್ಳನ್ನು ಜಗತ್ತು ನಂಬುತ್ತದೆ! ಮನ್ನಿಸುತ್ತದೆ! ಹಾಲನ್ನು ಬೀದಿ ಬೀದಿ ತಿರುಗಿ ಮಾರಬೇಕಾಗುತ್ತದೆ, ಆದರೆ ಮದಿರೆಯು ಕುಳಿತಲ್ಲೇ ಮಾರಾಟವಾಗುತ್ತದೆ!

-ಕಬೀರದಾಸ್

★ ಯಾರು ಸ್ವದೇಶವನ್ನು ಪ್ರೀತಿಸಲಾರನೋ ಅವನು ಏನನ್ನೂ ಪ್ರೀತಿಸಲಾರ.

-ಲಾರ್ಡ್ ಬೈರನ್

★ ಎಲ್ಲರೂ ಓದಬೇಕೆನ್ನುವ, ಯಾರೂ ಓದದ ಕಾವ್ಯವೇ ಮಹಾಕಾವ್ಯ.

-ಮಾರ್ಕ್ ಟ್ವೈನ್

★ ತಿಳಿಯುವ ಸ್ವಾತಂತ್ರ್ಯ, ಮಾತನಾಡುವ, ಚರ್ಚಿಸುವ ಸ್ವಾತಂತ್ರ್ಯ ಎಲ್ಲ ಸ್ವಾತಂತ್ರ್ಯಗಳಿಗಿಂತ ಅತಿಶಯವಾದದ್ದು.

-ಜಾನ್ ಮಿಲ್ಟನ್

★ ಬರೆಯುವುದು ಎಷ್ಟು ಕಷ್ಟ ಅಥವಾ ಬರೆಯಲೇಬೇಕಾದಾಗ ಅದೆಷ್ಟು ಸುಲಭ ಮತ್ತು ಸುಖದಾಯಕ ಕೂಡ.

-ಪಿ.ಲಂಕೇಶ್

★ ಸುಖದ ನಂತರ ದುಃಖ ಬರುತ್ತದೆ. ನಮಗೆ ಎರಡೂ ಬೇಕಾಗಿಲ್ಲ. ಎರಡೂ ನಮ್ಮ ನಿಜ ಸ್ವಭಾವವನ್ನು ಮರೆಸುತ್ತವೆ. ಒಂದು ಕಬ್ಬಿಣದ ಸಂಕೋಲೆಯಾದರೆ ಇನ್ನೊಂದು ಚಿನ್ನದ ಸಂಕೋಲೆ.

-ಸ್ವಾಮಿ ವಿವೇಕಾನಂದ

★ ಧಾರ್ಮಿಕ, ಸಾಮಾಜಿಕ, ಆರ್ಥಿಕ– ಹೀಗೆ ಎಲ್ಲ ಬಗೆಯ ಪಕ್ಷಪಾತ ಕಟ್ಟಳೆಗಳಿಗೂ ಸ್ತ್ರೀ ಸುಲಭವಾಗಿ ಬಲಿಯಾಗುತ್ತಿದ್ದಾಳೆ. ಆದರೆ ಗಂಡಸು ಕಟ್ಟಳೆಗಳನ್ನು ಮಾಡುವ ವ್ಯಕ್ತಿಯಾಗಿ ಅನೇಕ ಬಾರಿ ಅವುಗಳಿಗೆ ಅತೀತನಾಗಿದ್ದಾನೆ.

-ಬಿ.ಆರ್.ಅಂಬೇಡ್ಕರ್